5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 97/2021

ದಿನಾಂಕ ಃ 18.05.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ
ಸಿ. ಡಬ್ಲ್ಯೂ :9 ಪಿ. ಡಬ್ಲ್ಯೂ :9

| | |
|---|---|
| ಸಾಕ್ಷಿದಾರರ ಹೆಸರು | ಸತೀಶ್ |
| ತಂದೆಯ ಹೆಸರು | ಲೇಟ್ ಅರುಣ |
| ವಯಸ್ಸು | 21 ವರ್ಷ |
| ಉದ್ಯೋಗ | ಹೂವು ಮಾರುವ ಕೆಲಸ |
| ವಾಸ | ತಮಿಳು ಕಾಲೋನಿ, ನೆಹರು ನಗರ, ಮಂಡ್ಯ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ಈಗ ನನಗೆ ನ್ಯಾಯಾಲಯದ ವಿ.ಸಿ. ಮೂಲಕ ತೋರಿಸಿದ, ಕಾರಾಗೃಹದಲ್ಲಿ ಇರುವ ಆರೋಪಿಯಾದ ಮುತ್ತುರಾಜುವನ್ನು ನೋಡಿರುತ್ತೇನೆ. ಆರೋಪಿಯನ್ನು ಶಂಕರಮಠ ಮಸೀದಿಯ ಹತ್ತಿರ ಇರುವ ಗುಜುರಿ ಅಂಗಡಿ ಹತ್ತಿರ ನೋಡಿದ್ದೆನು. ಆರೋಪಿ, ಅಲ್ಲಿ ಪೊಲೀಸರ ಜೊತೆಯಲ್ಲಿ ಇದ್ದರು. ನಾನು ಮತ್ತು ಅಭಿ ಎನ್ನುವವರು ಸಹ ಇದ್ದೆವು. ಅಭಿ ಸಹ ಹೂವು ಮಾರುವ ಕೆಲಸ ಮಾಡುತ್ತಾರೆ. ಸದರಿ ಸ್ಥಳದಲ್ಲಿ ಕೊಲೆಯಾಗಿತ್ತು, ಆದ್ದರಿಂದ ಪೊಲೀಸರು ಮತ್ತು ಆರೋಪಿ ಅಲ್ಲಿಗೆ ಬಂದಿದ್ದರು. ಪೊಲೀಸರು, ಆರೋಪಿಗೆ, ಕೊಲೆ ಎಲ್ಲಿ ಆಯಿತು ಎಂದು ಕೇಳುತ್ತಿದ್ದರು. ಆಗ ಆರೋಪಿ, ಕೊಲೆಯಾಗಿದ್ದ ಸ್ಥಳವನ್ನು ತೋರಿಸುತ್ತಿದ್ದರು. ನನಗೆ ಗೊತ್ತಾದಂತೆ, ಆರೋಪಿ ಮುತ್ತುರಾಜು ಕೊಲೆ ಮಾಡಿದ್ದರು. ಕೊಲೆಯಾಗಿದ್ದ ಸ್ಥಳದ ಸುತ್ತ ಮುತ್ತಲೂ ಗುಜರಿ ಅಂಗಡಿ, ಪೈಂಟ್ ಅಂಗಡಿ ಇದೆ. ಅಂದಾಜು 3 ವರುಷಗಳ ಹಿಂದೆ, ಪೊಲೀಸರು ಮತ್ತು ಆರೋಪಿ ಸದರಿ ಸ್ಥಳಕ್ಕೆ ಬಂದಿದ್ದರು. ಪೊಲೀಸರು ಮತ್ತು ಆರೋಪಿ ಸ್ಥಳಕ್ಕೆ ಬಂದಿದಾಗ ಮಧ್ಯಾಹ್ನ 1.00 ಗಂಟೆ ಆಗಿತ್ತು. ಆರೋಪಿ ತೋರಿಸಿದ ಜಾಗದಲ್ಲಿ, ಪೊಲೀಸರು ಆರೋಪಿಯನ್ನು ನಿಲ್ಲಿಸಿಕೊಂಡು ಫೋಟೋ ತೆಗೆಸಿದ್ದರು. ನಂತರ ಪೊಲೀಸರು ಆರೋಪಿಯನ್ನು ಕರೆದುಕೊಂಡು ಹೊರಟು ಹೋದರು. ನಾನು ಮತ್ತು ಅಭಿ ಎನ್ನುವವರು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದೆವು. ಈಗ ನನಗೆ ತೋರಿಸಿದ ನಿಪಿ.20 ಪೊಲೀಸ್

ಪಂಚರ ನೋಟಿಸ್ ಗೆ ನಾನು ಪೊಲೀಸ್ ಠಾಣೆಯಲ್ಲಿ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ. ಪೊಲೀಸರು ನನ್ನಿಂದ ಇನ್ನೊಂದು ಹೆಬ್ಬೆಟ್ಟಿನ ಗುರುತನ್ನು ಪೊಲೀಸ್ ಠಾಣೆಯಲ್ಲಿ ಹಾಕಿಸಿಕೊಂಡಿದ್ದರು.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

1) ಪೊಲೀಸರು, ನನ್ನನ್ನು ಮತ್ತು ಅಭಿಯನ್ನು ಮೊದಲಿಗೆ ಪೊಲೀಸ್ ಇನ್ಸ್ ಪೆಕ್ಟರ್ ಕಚೇರಿಗೆ ಕರೆಸಿಕೊಂಡಿದ್ದರು ಎಂದರೆ ಸರಿ. ಅಲ್ಲಿ ಕೇಸಿನ ವಿಚಾರವನ್ನು ನಮಗೆ ತಿಳಿಸಿ, ಆರೋಪಿ ಮುತ್ತುರಾಜುವನ್ನು ತೋರಿಸಿ, ಇವರು ಕೃತ್ಯ ನಡೆದ ಸ್ಥಳವನ್ನು ತೋರಿಸುವಾಗ ಪಂಚನಾಮೆ ಮಾಡಬೇಕಾಗಿದ್ದು, ಸಾಕ್ಷಿದಾರರಾಗಿ ಸಹಕರಿಸಬೇಕು ಎಂದು ಕೋರಿ, ನನ್ನನ್ನು ಮತ್ತು ಅಭಿಯನ್ನು ಜೀಪ್ ನಲ್ಲಿ ಕರೆದುಕೂಂಡು ಹೋದರು ಎಂದರೆ ಸರಿ. ಪೊಲೀಸರು ಪೊಲೀಸ್ ಠಾಣೆಯಲ್ಲಿ ನಿಪಿ.20 ಪೊಲೀಸ್ ಪಂಚರ ನೋಟಿಸ್‌ಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡಿದ್ದರು ಎಂದರೆ ಸರಿ. ಗುಜುರಿ ಅಂಗಡಿಯ ಹತ್ತಿರವೂ ಸಹ ಪೊಲೀಸರು ಸ್ಥಳವನ್ನು ತೋರಿಸಿ, ನಿಪಿ.19 ಮಹಜರ್ ಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡಿದ್ದರು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಬಿ ಕೆ ಜಿ ವಕೀಲರಿಂದ - ಎಲ್. ಎ.ಡಿ.ಸಿ. ವಕೀಲರಿಂದಃ</u>

1) ಅಭಿ ಮತ್ತು ನಾನು ಸ್ನೇಹಿತರು ಎಂದರೆ ಸರಿ. ನಮ್ಮಿಬ್ಬರನ್ನು ಪೊಲೀಸರೇ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನಾನು ಪೊಲೀಸ್ ಠಾಣೆಯಲ್ಲಿ ಹೆಬ್ಬೆಟ್ಟನ್ನು ಹಾಕಿದ ನಂತರ ಬೇರೆ ಎಲ್ಲಿಗೂ ಹೋಗಲಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವೆರದು ಹೇಳುತ್ತಾರೆ, ಮನೆಗೆ ಹೋದೆನು ಎಂದು. ನಾನು ಯಾವ ವಿಚಾರಕ್ಕೆ ಹೆಬ್ಬೆಟ್ಟು ಹಾಕಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ನನ್ನನ್ನು ಮತ್ತು ಅಭಿಯನನ್ನು ಜೀಪ್ ನಲ್ಲಿ ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವತಃ ನುಡಿಯುತ್ತಾರೆ, ಘಟನಾ ಸ್ಥಳದಲ್ಲಿ ನೋಡಿದ್ದೆನು ಎಂದು. ಪೊಲೀಸರು ನನಗೆ ಹೇಳಿದ್ದರಿಂದ, ನಾನು ಆರೋಪಿಯನ್ನು

ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಆಗಾಗ ಯಾವಾಗಲೂ ಸಾಕ್ಷಿಯಾಗುವುದಕ್ಕೆ ಠಾಣೆಗೆ ಕರೆಸುತ್ತಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.